

ನಿಟ್ಟಿನಲ್ಲಿ ಕನ್ನಡವನ್ನು ತಂತ್ರಜ್ಞಾನಕ್ಕೆ ಒಗ್ಗಿಸುವ, ತಂತ್ರಜ್ಞಾನದ ಮೂಲಕ ಕನ್ನಡದ ಭವಿಷ್ಯದ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನಗಳು ಗಂಭೀರವಾಗಿ ನಡೆಯುತ್ತಿವೆ. ಅಂಥ ಕೆಲವು ಪ್ರಾತಿನಿಧಿಕ ಪ್ರಯತ್ನಗಳ ಪರಿಚಯ ಮಾಡಿಕೊಳ್ಳೋಣ ಬನ್ನಿ.

## ಹೊತ್ತಿಗೆಕಟ್ಟೆ ‘ಬುಕ್ ಬ್ರಹ್ಮ’

ಹೆಸರೇ ಸೂಚಿಸುವ ಹಾಗೆ ಕನ್ನಡ ಪುಸ್ತಕಗಳ ಕುರಿತು ಸಮಗ್ರ ಮಾಹಿತಿಗಳನ್ನು ಒಂದೆಡೆಗೆ ಕಲೆಹಾಕುವ ಪ್ರಯತ್ನದಲ್ಲಿ ರೂಪುಗೊಂಡು ವೆಬ್‌ತಾಣ ‘ಬುಕ್ ಬ್ರಹ್ಮ’ (bookbrahma.com). ಉದ್ಯಮದ ಆಯಾಮವನ್ನು ಇಟ್ಟುಕೊಂಡೇ ಕನ್ನಡದ ಪುಸ್ತಕಗಳ ಕುರಿತ ಮಾಹಿತಿಯನ್ನು ಹೆಚ್ಚು ಓದುಗರಿಗೆ ತಲುಪಿಸುವ ಕೆಲಸವನ್ನು ‘ಬುಕ್ ಬ್ರಹ್ಮ’ ಮಾಡುತ್ತಿದೆ. ಹೊಸ ಪುಸ್ತಕಗಳ ಬಗೆಗೆ ಟಿಪ್ಪಣಿ, ಪುಸ್ತಕ ಎಲ್ಲಿ ಸಿಗುತ್ತದೆ ಎಂಬ ಮಾಹಿತಿ, ಅದರ ಬಗೆಗಿನ ಲೇಖನ–ವಿಮರ್ಶೆ ಹೀಗೆ ಒಂದು ಪುಸ್ತಕದ ಬಗ್ಗೆ ಎಷ್ಟು ಸಾಧ್ಯವೋ ಅಷ್ಟೂ ಮಾಹಿತಿಯನ್ನು ಈ ವೇದಿಕೆ ನೀಡುತ್ತಿದೆ. ಲೇಖಕರನ್ನು ಪರಿಚಯಿಸುವ ಅಂಕಣವೂ ಇದೆ. ಇದು ನಿತ್ಯವೂ ಅಪ್‌ಡೇಟ್ ಆಗುತ್ತಲೇ ಇರುತ್ತದೆ. ಓದುಗರು, ಪ್ರಕಾಶಕರು, ಲೇಖಕರು, ವಿಮರ್ಶಕರನ್ನು ಒಂದೆಡೆ ಸೇರಿಸುವ ಈ ಪ್ರಯತ್ನಕ್ಕೆ ಒಳ್ಳೆಯ ಪ್ರತಿಕ್ರಿಯೆಯೂ ವ್ಯಕ್ತವಾಗುತ್ತಿದೆ.

ಈ ರೀತಿಯ ಕನ್ನಡ ಹೊತ್ತಿಗೆಕಟ್ಟೆಯನ್ನು ರೂಪಿಸುವ ಕೆಲಸ ಕನ್ನಡದಲ್ಲಿ ಹಿಂದೆ ‘ಚುಕ್ಕುಬುಕ್ಕು’ ಎಂಬ ಜಾಲತಾಣದ ಮೂಲಕ ಮಾಡಲಾಗಿತ್ತು. ಆದರೆ ಅದು ಹೆಚ್ಚುಕಾಲ ಉಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಇದುವರೆಗೆ ಇಂಥ ಪ್ರಯತ್ನಗಳು ನಡೆದಿರುವುದು ವ್ಯಕ್ತಿಯೊಬ್ಬನ ಅಥವಾ ಸಣ್ಣ ಗುಂಪಿನ ಸಾಹಿತ್ಯಪ್ರೀತಿಯಿಂದಲೇ ಹೊರತು ಯಾವುದೇ ಲಾಭದ ಉದ್ದೇಶದಿಂದ ಅಲ್ಲವೇ ಅಲ್ಲ. ಯಾಕೆಂದರೆ ಇಂಥ ಜಾಲತಾಣಗಳಿಂದ ತಕ್ಷಣ ಲಾಭ ಪಡೆದುಕೊಳ್ಳುವುದು ಸಾಧ್ಯವಿರುವುದಿಲ್ಲ. ಹೀಗಾಗಿಯೇ ಇವುಗಳ ಜೀವಾವಧಿಯೂ ಕಮ್ಮಿಯೇ ಆಗಿರುತ್ತದೆ. ‘ಬುಕ್ ಬ್ರಹ್ಮ’ ಭಿನ್ನವಾಗಿ ನಿಲ್ಲುವುದೇ ಈ ವಿಷಯದಲ್ಲಿ. ಈ ಜಾಲತಾಣಕ್ಕೆ ತನ್ನದೇ ಆದ ಕಚೇರಿಯಿದೆ; ಸಿಬ್ಬಂದಿವರ್ಗವಿದೆ. ಅವರು ಸಂಬಳಕ್ಕೆ ಕೆಲಸ ಮಾಡುತ್ತಾರೆ. ಈ ಕೆಲಸ ಅವರ ಆಸಕ್ತಿಯಷ್ಟೇ ಅಲ್ಲ, ಆದಾಯದ ಮೂಲವೂ ಆಗಿದೆ.

‘ಕನ್ನಡದಲ್ಲಿ ವರ್ಷಕ್ಕೆ ಸುಮಾರು ಆರು ಸಾವಿರ ಪುಸ್ತಕಗಳು ಪ್ರಕಟವಾಗುತ್ತವೆ. ಆದರೆ ಎಲ್ಲ ಪತ್ರಿಕೆಗಳಲ್ಲಿ ಲೆಕ್ಕ ಹಾಕಿದರೆ ಇದರ ಕಾಲು ಭಾಗದ ಮಾಹಿತಿಯೂ ಸಿಗುವುದಿಲ್ಲ. ಈ ಕೊರತೆಯನ್ನು ನಿವಾರಿಸುವ ಪ್ರಯತ್ನ ‘ಬುಕ್ ಬ್ರಹ್ಮ’ನದ್ದು. ಕನ್ನಡ ಪುಸ್ತಕಕ್ಕೆ ಸಂಬಂಧಿಸಿದಂತೆ ಎಲ್ಲೇ ಕಾರ್ಯಕ್ರಮ ನಡೆದರೂ ಅದರ ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳಬಹುದು’ ಎಂದು ಮಾಹಿತಿ ನೀಡುತ್ತಾರೆ ‘ಬುಕ್ ಬ್ರಹ್ಮ’ದ ಸಂಪಾದಕ ದೇವು ಪತ್ತಾರ.

ಸದ್ಯಕ್ಕೆ ಮಾಹಿತಿಗಳ ಸಂಗ್ರಹ ಮತ್ತು ಪ್ರಕಟಣೆಯನ್ನು ‘ಬುಕ್ ಬ್ರಹ್ಮ’ ಸಂಪಾದಕೀಯ ತಂಡ ನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ, ಲೇಖಕರು, ಪ್ರಕಾಶಕರೇ ಪುಸ್ತಕದ ಬಗೆಗೆ ಮಾಹಿತಿಯನ್ನು ಈ ತಾಣಕ್ಕೆ ಹಂಚಿಕೊಳ್ಳುವ ವ್ಯವಸ್ಥೆಯೂ ಬರಲಿದೆ.

